**ಕರ್ನಾಟಕ ಸರ್ಕಾರ**

**ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ**

**ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.**

**ಸಂಖ್ಯೆ : ವಾಇ : ಉ ನಿ : ಸುಮಪ : 2018–19** **ದಿನಾಂಕ: 05–03–2019**

**ಪತ್ರಿಕಾ ಆಮಂತ್ರಣ**

1. ಕೃಷಿ ಇಲಾಖೆ ವತಿಯಿಂದ ಕೃಷಿ ಪಂಡಿತ ಪ್ರಶಸ್ತಿ ಮತ್ತು ಕೃಷಿ ಪ್ರಶಸ್ತಿ ಪ್ರದಾನ ಸಮಾರಂಭ:

**ಉದ್ಘಾಟನೆ ಹಾಗೂ ಪ್ರಶಸ್ತಿ ಪ್ರದಾನ:**

ಹೆಚ್.ಡಿ. ಕುಮಾರಸ್ವಾಮಿ,
ಮುಖ್ಯಮಂತ್ರಿಗಳು

**ಅಧ್ಯಕ್ಷತೆ:**

ಆರ್. ರೋಷನ್ ಬೇಗ್,
ಶಾಸಕರು,
ಶಿವಾಜಿನಗರ ವಿಧಾನಸಭಾ ಕ್ಷೇತ್ರ.

**ಸ್ಮರಣ ಸಂಚಿಕೆ ಬಿಡುಗಡೆ:**

ಎನ್.ಹೆಚ್. ಶಿವಶಂಕರ ರೆಡ್ಡಿ,
ಕೃಷಿ ಸಚಿವರು.

**ಮುಖ್ಯ ಅತಿಥಿಗಳು:**

ಬಂಡೆಪ್ಪ ಖಾಶೆಂಪೂರ
ಸಹಕಾರ ಸಚಿವರು.

ವೆಂಕಟರಾವ್ ನಾಡಗೌಡ,
ಪಶುಸಂಗೋಪನೆ ಮತ್ತು ಮೀನುಗಾರಿಕೆ ಸಚಿವರು

ಎಂ.ಸಿ. ಮನಗುಳಿ,
ತೋಟಗಾರಿಕೆ ಸಚಿವರು.

ಸಾ.ರಾ. ಮಹೇಶ್,
ರೇಷ್ಮೆ ಮತ್ತು ಪ್ರವಾಸೋದ್ಯಮ ಸಚಿವರು.

ಸತೀಶ್ ಎಲ್. ಜಾರಕಿಹೊಳಿ,
ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು.

ಪಿ. ಸಿ. ಮೋಹನ್,
ಲೋಕಸಭಾ ಸದಸ್ಯರು
ಬೆಂಗಳೂರು ಕೇಂದ್ರ ಲೋಕಸಭಾ ಕ್ಷೇತ್ರ

**ದಿನಾಂಕ : 06–03–2019 ರಂದು ಬುಧವಾರ ಬೆಳಿಗ್ಗೆ 11–30 ಗಂಟೆಗೆ**
**ಸ್ಥಳ : ಬ್ಯಾಂಕ್ವೆಟ್ ಹಾಲ್, ವಿಧಾನಸೌಧ, ಬೆಂಗಳೂರು.**

2. ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ವತಿಯಿಂದ ತಿಪ್ಪಗೊಂಡನಹಳ್ಳಿ ಜಲಾಶಯವನ್ನು ಮೊದಲನೇ ಹಂತದಲ್ಲಿ ಪುನಶ್ಚೇತನಗೊಳಿಸುವ ಕಾಮಗಾರಿಯ ಶಂಕುಸ್ಥಾಪನಾ ಸಮಾರಂಭ:

**ಉದ್ಘಾಟನೆ:**
ಹೆಚ್.ಡಿ. ಕುಮಾರಸ್ವಾಮಿ,
ಮುಖ್ಯಮಂತ್ರಿಗಳು
**ಘನ ಉಪಸ್ಥಿತಿ:**
ಡಾ. ಜಿ. ಪರಮೇಶ್ವರ್,
ಉಪ ಮುಖ್ಯಮಂತ್ರಿಗಳು.

**ಗೌರವಾನ್ವಿತ ಅತಿಥಿಗಳು:**
ಡಿ.ವಿ. ಸದಾನಂದ ಗೌಡ,
ಸಾಂಖ್ಯಿಕ ಮತ್ತು ಕಾರ್ಯಕ್ರಮ ಅನುಷ್ಠಾನ ಹಾಗೂ ರಾಸಾಯನಿಕ ಮತ್ತು ರಸಗೊಬ್ಬರ, ಸಂಸದೀಯ ವ್ಯವಹಾರಗಳ ಸಚಿವರು.

ಶ್ರೀಮತಿ ನಿರ್ಮಲಾ ಸೀತಾರಾಮನ್,
ರಕ್ಷಣಾ ಸಚಿವರು.

ಕೆ.ಜೆ. ಜಾರ್ಜ್,
ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು

ಕೃಷ್ಣ ಬೈರೇಗೌಡ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು.

ಬಿ.ಜಡ್. ಜಮೀರ್ ಅಹ್ಮದ್ ಖಾನ್,
ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳು ಹಾಗೂ
ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು

ಡಾ. ಜಯಮಾಲಾ ರಾಮಚಂದ್ರ,
ಮಹಿಳಾ ಮತ್ತು ಮಕ್ಕಳ ಕಲ್ಯಾಣ, ಹಿರಿಯ ನಾಗರೀಕರು ಮತ್ತು ವಿಕಲಚೇತನರ
ಸಬಲೀಕರಣ ಸಚಿವರು.

**ಅಧ್ಯಕ್ಷತೆ:**
ಎಸ್.ಟಿ. ಸೋಮಶೇಖರ್,
ಅಧ್ಯಕ್ಷರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಹಾಗೂ
ಶಾಸಕರು, ಯಶವಂತಪುರ ವಿಧಾನಸಭಾ ಕ್ಷೇತ್ರ
**ಸಹ ಅಧ್ಯಕ್ಷತೆ:**
ಎ. ಮಂಜುನಾಥ್.
ಶಾಸಕರು.
ಮಾಗಡಿ ವಿಧಾನಸಭಾ ಕ್ಷೇತ್ರ.
**ದಿನಾಂಕ : 06-03-2019 ರಂದು ಬುಧವಾರ ಸಂಜೆ : 4-00 ಗಂಟೆಗೆ**
**ಸ್ಥಳ : ತಿಪ್ಪಗೊಂಡನಹಳ್ಳಿ ಜಲಾಶಯದ ಆವರಣ, ಮಾಗಡಿ ಮುಖ್ಯರಸ್ತೆ. ಬೆಂಗಳೂರು ದಕ್ಷಿಣ ತಾಲ್ಲೂಕು, ಬೆಂಗಳೂರು.**

3 ಕನ್ನಡ ಪುಸ್ತಕ ಪ್ರಾಧಿಕಾರ ವತಿಯಿಂದ "ನಿಮ್ಮ ಮನೆಗೆ ನಮ್ಮ ಪುಸ್ತಕ":

**ಅತಿಥಿ:**
ಡಾ. ವಿಜಯಲಕ್ಷ್ಮೀ ದೇಶಮಾನೆ,
ಅಧ್ಯಕ್ಷರು, ಅಬಲಾಶ್ರಮ

**ನಮ್ಮೊಂದಿಗೆ:**
ಡುಂಡಿರಾಜ್,
ಸುಪ್ರಸಿದ್ಧ ಕವಿ

**ಪುಸ್ತಕಗಳೊಂದಿಗೆ**
ಡಾ. ವಸುಂಧರಾ ಭೂಪತಿ
ಅಧ್ಯಕ್ಷರು,
ಕನ್ನಡ ಪುಸ್ತಕ ಪ್ರಾಧಿಕಾರ

**ದಿನಾಂಕ : 06-03-2019 ರಂದು ಬುಧವಾರ ಸಂಜೆ : 5-30 ಗಂಟೆಗೆ**
**ಸ್ಥಳ : ಅಬಲಾಶ್ರಮ, ಪಿ.ಪಿ.ಜಿ. ರಸ್ತೆ, ಬಸವನಗುಡಿ, ಬೆಂಗಳೂರು.**

**ಪತ್ರಿಕಾ ಪ್ರಕಟಣೆ**

# ಸಮಗ್ರ ಕರಸಮಾಧಾನ ಯೋಜನೆ-2019

ಬೆಂಗಳೂರು, ಮಾರ್ಚ್ 5 (ಕರ್ನಾಟಕ ವಾರ್ತೆ)

ಸರಕು ಮತ್ತು ಸೇವಾ ತೆರಿಗೆಯ ಅನುಷ್ಠಾನಕ್ಕೂ ಮೊದಲು ವಾಣಿಜ್ಯ ತೆರಿಗೆಗಳ ಇಲಾಖೆಯು ನಿರ್ವಹಿಸುತ್ತಿದ್ದ ಎಲ್ಲಾ ಕಾಯ್ದೆಗಳ ಅಡಿಯಲ್ಲಿ ಇರುವ ಬಾಕಿ ತೆರಿಗೆಗೆ ಕರಸಮಾಧಾನ ಯೋಜನೆಯನ್ನು ವಿಸ್ತರಿಸುವಂತೆ ವಾಣಿಜ್ಯೋದ್ಯಮಗಳು ಮಾಡಿದ

ಮನವಿಯನ್ನು ಪರಿಗಣಿಸಿ, ಮುಖ್ಯಮಂತ್ರಿಯವರು ತೆರಿಗೆ ಬಾಕಿಯನ್ನು ಕಡಿಮೆ ಮಾಡುವ ಉದ್ದೇಶದಿಂದ ಒಂದು 'ಸಮಗ್ರ ಕರಸಮಾಧಾನ ಯೋಜನೆ; ಯನ್ನು ಫೆಬ್ರವರಿ 2019 ರ ತಮ್ಮ ಆಯವ್ಯಯ ಭಾಷಣದಲ್ಲಿ ಘೋಷಿಸಿರುತ್ತಾರೆ.

ಆಯವ್ಯಯದ ಘೋಷಣೆಯನ್ನು ಅನುಷ್ಠಾನಗೊಳಿಸುವ ಸಲುವಾಗಿ ಒಂದು 'ಸಮಗ್ರ ಕರಸಮಾಧಾನ ಯೋಜನೆ-2019' ನ್ನು ಸರ್ಕಾರದ ಆದೇಶ ಸಂಖ್ಯೆ ಎಫ್‌ಡಿ 9 ಸಿಎಸ್‌ಎಲ್ 2019, ದಿನಾಂಕ: 21ನೇ ಫೆಬ್ರವರಿ2019 ರಂತೆ ಜಾರಿಗೊಳಿಸಲಾಗಿರುತ್ತದೆ. ಇದು ಅತ್ಯಂತ, ಸಮಗ್ರತೆಯಿಂದ ಕೂಡಿದ್ದು, ವಾಣಿಜ್ಯ ತೆರಿಗೆಗಳ ಇಲಾಖೆಯು ಸರಕು ಮತ್ತು ಸೇವಾ ತೆರಿಗೆಯ ಅನುಷ್ಠಾನದ ಪೂರ್ವದಲ್ಲಿ ನಿರ್ವಹಿಸುತ್ತಿದ್ದ ಈ ಕೆಳಕಂಡ ಎಲ್ಲಾ ಕಾಯ್ದೆಗಳಡಿಯಲ್ಲಿನ ತೆರಿಗೆ ಬಾಕಿಗಳಿಗೆ ಸಂಬಂಧಿಸಿದಂತೆ ಪರಿಹಾರವನ್ನು ಒದಗಿಸುತ್ತದೆ.

ಕರ್ನಾಟಕ ಮಾರಾಟ ತೆರಿಗೆ ಕಾಯ್ದೆ 1957, ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಕಾಯ್ದೆ 2003, ಕೇಂದ್ರ ಮಾರಾಟ ತೆರಿಗೆ ಕಾಯ್ದೆ, 1956, ಕರ್ನಾಟಕ ಪ್ರವೇಶ ತೆರಿಗೆ ಕಾಯ್ದೆ. 1979, ಕರ್ನಾಟಕ ವೃತ್ತಿಗಳು, ವ್ಯವಹಾರಗಳು, ಅಜೀವಿಕೆಗಳು ಮತ್ತು ಉದ್ಯೋಗಗಳ ಮೇಲಣ ತೆರಿಗೆ ಕಾಯ್ದೆ, 1979, ಕರ್ನಾಟಕ ವಿಲಾಸ ತೆರಿಗೆ ಕಾಯ್ದೆ, 1979, ಕರ್ನಾಟಕ ಮನರಂಜನಾ ತೆರಿಗೆ ಕಾಯ್ದೆ, 1958 ಮತ್ತು ಕರ್ನಾಟಕ ಕೃಷಿ ವರಮಾನ ತೆರಿಗೆ ಕಾಯ್ದೆ, 1957.

ಈ ಯೋಜನೆಯ ಸಮಗ್ರತೆಗೆ ಕಾರಣವಾಗುವ ಇನ್ನೊಂದು ಲಕ್ಷಣವೇನೆಂದರೆ, ಈ ಯೋಜನೆಯ ಪರಿಧಿಯೊಳಗೆ ಮೊದಲ ಬಾರಿಗೆ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಕಾಯ್ದೆ 2003 ರ ಅಡಿಯಲ್ಲಿ ಮಾಸಿಕ ವರದಿಗಳನ್ನು ಸಲ್ಲಿಸದೇ ಇರುವ ಕಾರಣಕ್ಕಾಗಿ ಹಾಗೂ ವ್ಯಾಟ್ -240 ಸಲ್ಲಿಸದೇ ಇರುವ ಕಾರಣಕ್ಕಾಗಿ ಕ್ರಮವಾಗಿ ಕಲಂ 72(1)(ಎ) ಅಥವಾ 72(1) (ಬಿ) ಮತ್ತು 74 (4) ರ ಅಡಿಯಲ್ಲಿ ವಿಧಿಸಲಾಗಿರುವ ದಂಡಗಳನ್ನೂ ಒಳಗೊಂಡಿರುವುದು ಆಗಿರುತ್ತದೆ. ಅಲ್ಲದೆ, ಮೊದಲ ಬಾರಿಗೆ ಮೇಲೆ ನಮೂದಿಸಿರುವ ಎಲ್ಲಾ ಕಾಯ್ದೆಗಳಡಿಯಲ್ಲಿನ ಸಂಬಂಧಿಸಿದ ತೆರಿಗೆಯ ಪೂರ್ಣ ಪಾವತಿಸುವ ಷರತ್ತಿಗೆ ಒಳಪಟ್ಟು, ಎಲ್ಲಾ ಬಾಕಿ ತೆರಿಗೆಯ ಮೇಲೆ ವಿಧಿಸಲಾದ ದಂಡ ಮತ್ತು ಬಡ್ಡಿಯನ್ನು ಶೇ 100 ರಷ್ಟು ಮನ್ನಾ ಮಾಡುವುದನ್ನು ಈ ಯೋಜನೆಯು ಒಳಗೊಂಡಿರುತ್ತದೆ. ಈ ಯೋಜನೆಯನ್ನು ಆಯ್ಕೆ ಮಾಡಿಕೊಂಡ ವರ್ತಕರು ಒಂದು ವೇಳೆ ಹೆಚ್ಚುವರಿಯಾಗಿ ಪಾವತಿಸಿದ್ದಲ್ಲಿ ಮರುಪಾವತಿಗೆ ಅರ್ಹರಲ್ಲ ಎಂಬ ಷರತ್ತಿಗೆ ಒಳಪಟ್ಟು ಮನವಿಯನ್ನು ಸಲ್ಲಿಸುವ ಸಮಯದಲ್ಲಿ ಈಗಾಗಲೇ ಪಾವತಿಸಲಾಗಿರುವ ಬಡ್ಡಿ ಅಥವಾ ದಂಡವನ್ನು ಬಾಕಿ ತೆರಿಗೆಗೆ ಸರಿದೂಗಿಸುವ ಸೌಲಭ್ಯವನ್ನು ಸಹ ಇದು ಒಳಗೊಂಡಿರುತ್ತದೆ.

ಸಾಕಷ್ಟು ಸಮಯಾವಕಾಶ ನೀಡಿರುವುದು ಈ ಯೋಜನೆಯ ಒಂದು ಪ್ರಮುಖ ಅಂಶವಾಗಿದ್ದು, 30.6.2019 ರವರೆಗೆ ಈಗಾಗಲೇ ವಿಲೇವಾರಿ ಮಾಡಲಾದ/ವಿಲೇವಾರಿ ಮಾಡಬೇಕಾದ ಕರ ನಿರ್ಧಾರಣೆ/ಮರು ಕರ ನಿರ್ಧಾರಣೆಗಳಲ್ಲಿನ ತೆರಿಗೆ ಬಾಕಿಯು ಸಹ ಈ ಯೋಜನೆಗೆ ಅರ್ಹರಿರುತ್ತವೆ ಮತ್ತು ಬಾಕಿ ತೆರಿಗೆ ಮೊತ್ತವನ್ನು ಪಾವತಿಸಲು 30.9.2019 ರವರೆಗೆ ಕಾಲಾವಕಾಶವನ್ನು ನೀಡಲಾಗಿದೆ. ಅಂದರೆ ವರ್ತಕರಿಗೆ ಈ ಯೋಜನೆಯ ಲಾಭಗಳನ್ನು ಪಡೆಯಲು 200 ದಿನಗಳಿಗೂ ಅಧಿಕ ಕಾಲಾವಕಾಶದ ಸುವರ್ಣಾವಕಾಶವನ್ನು ಒದಗಿಸುತ್ತದೆ.

ಪಾರದರ್ಶಕ, ಸುಲಲಿತವಾದ ಕಾರ್ಯ ವಿಧಾನವನ್ನು ಸಹ ಜಾರಿಗೊಳಿಸಲಾಗಿದ್ದು, ಅದರಂತೆ ವರ್ತಕರು ಜಾಲತಾಣ http://gst.kar.nic.in ಅಥವಾ http://ctax.kar.nic.in ಗೆ ಲಾಗಿನ್ ಆಗಿ, ನಿಗದಿತ ಅರ್ಜಿಯನ್ನು ಭರ್ತಿಮಾಡಿ, ಆನ್‌ಲೈನ್‌ನಲ್ಲಿಯೇ ಪಾವತಿಯನ್ನು ಮಾಡಬಹುದಾಗಿರುತ್ತದೆ. ಯೋಜನೆಯನ್ವಯ ಸಂಬಂಧಿಸಿದ ಅಧಿಕಾರಿಗಳು ಅರ್ಜಿಗಳಲ್ಲಿರಬಹುದಾದ ನ್ಯೂನತೆಗಳನ್ನು 15 ದಿನಗಳ ಒಳಗಾಗಿ ಅರ್ಜಿದಾರರಿಗೆ ತಿಳಿಸಬೇಕಾಗಿದ್ದು, ಇದು ಯೋಜನೆಯ ಉಪಯುಕ್ತತೆಯನ್ನು ಖಾತ್ರಿಪಡಿಸಿಕೊಳ್ಳಲು ಅಧಿಕಾರಿಗಳ ಬದ್ಧತೆಯನ್ನು ಖಾತ್ರಿಪಡಿಸುತ್ತದೆ.

ಆದರೆ ಮನವಿ ಅಥವಾ ಪರಿಷ್ಕರಣೆ ಕೋರಿ ವಿವಿಧ ಮೇಲ್ಮನವಿ ಪ್ರಾಧಿಕಾರಗಳಲ್ಲಿ ಮತ್ತು ನ್ಯಾಯಾಲಯಗಳಲ್ಲಿ ರಾಜ್ಯವು ಮನವಿ ಸಲ್ಲಿಸಿರುವ ಪ್ರಕರಣಗಳಿಗೆ ಹಾಗೂ ಯಾವುದಾದರೂ ಪ್ರಾಧಿಕಾರವು 21–2–2019 ರಲ್ಲಿದ್ದಂತೆ ಸ್ವಯಂ ಪರಿಷ್ಕರಣೆಯನ್ನು ಪ್ರಾರಂಭಿಸಿದ್ದರೆ ಹಾಗೂ 30.06.2019 ರ ನಂತರ ಆದೇಶಗಳನ್ನು ತಿದ್ದುಪಡಿ ಮಾಡಿದ್ದರೆ ಅಂತಹ ಪ್ರಕರಣಗಳಿಗೆ ಈ ಯೋಜನೆಯು ಅನ್ವಯಿಸುವುದಿಲ್ಲ. ಮುಂದುವರೆದು, ಕೇಂದ್ರ ಮಾರಾಟ ತೆರಿಗೆ ಕಾಯ್ದೆ, 1956 ರ ಕಲಂ 10–ಎ ರಿಂದ ಉದ್ಭವಿಸುವ ದಂಡಗಳಿಗೆ ಈ ಯೋಜನೆಯು ಅನ್ವಯಿಸುವುದಿಲ್ಲ.

ಆದುದರಿಂದ, ರಾಜ್ಯದ ಎಲ್ಲಾ ವರ್ತಕರೂ, ಬಾಕಿ ತೆರಿಗೆ ಮೊತ್ತಗಳನ್ನು ಪಾವತಿಸಿ, ಬಡ್ಡಿ ಹಾಗೂ ದಂಡದ ಮನ್ನಾ ಕೋರಿ "ಸಮಗ್ರ ಕರಸಮಾಧಾನ ಯೋಜನೆ–2019" ನ್ನು ಆಯ್ಕೆ ಮಾಡಿಕೊಳ್ಳಬಹುದಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

# <u>ಮಾರ್ಚ್ 8 ರಂದು “ಉದ್ಯೋಗ ಮೇಳ”</u>

ಬೆಂಗಳೂರು, ಮಾರ್ಚ್ 5 (ಕರ್ನಾಟಕ ವಾರ್ತೆ)

**ರಾಷ್ಟ್ರೀಯ ವೃತ್ತಿ ಸೇವಾ ಯೋಜನೆ (NCSP) ಅಡಿಯಲ್ಲಿ ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆ, ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಗಳು, ಎಪ್ಯಾಟಿಕ್ ಕಟ್ಟಡ, ಎರಡನೇ ಮಹಡಿ, ಕೆಂಪೇಗೌಡ ರಸ್ತೆ, ಬೆಂಗಳೂರು – 560 009 ಹಾಗೂ ಖಾಸಗಿ ನಿಯೋಜಕರುಗಳ ಸಂಯುಕ್ತ ಆಶ್ರಯದಲ್ಲಿ ನಿರುದ್ಯೋಗಿ ಯುವಕ/ಯುವತಿಯರಿಗೆ ನೇರ ಸಂದರ್ಶನಕ್ಕೆ ಅನುಕೂಲವಾಗುವಂತೆ ಮಾರ್ಚ್ 8 ರಂದು ಶುಕ್ರವಾರ ಪೂರ್ವಾಹ್ನ 10.00 ಗಂಟೆಯಿಂದ ಸಂಜೆ 5.00 ಗಂಟೆಯವರೆಗೆ ಬಿ.ಟಿ.ಎಲ್. ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಅಂಡ್ ಮ್ಯಾನೇಜ್‌ಮೆಂಟ್ # 259/3, ಬೊಮ್ಮಸಂದ್ರ ಕೈಗಾರಿಕಾ ಪ್ರದೇಶ, ಹೊಸೂರು ರಸ್ತೆ, ಬೆಂಗಳೂರು – 560 099 ಇಲ್ಲಿ “ಉದ್ಯೋಗ ಮೇಳ’ ವನ್ನು ಹಮ್ಮಿಕೊಳ್ಳಲಾಗಿದೆ.**

**ಈ ಉದ್ಯೋಗ ಮೇಳದಲ್ಲಿ ಖಾಸಗಿ ವಲಯದ 50 ಕ್ಕೂ ಹೆಚ್ಚು ಹೆಸರಾಂತ ಸಂಸ್ಥೆಗಳು ಭಾಗವಹಿಸುತ್ತಿದ್ದು, ವಿವಿಧ ತಾಂತ್ರಿಕ ಹಾಗೂ ತಾಂತ್ರಿಕೇತರ ಹುದ್ದೆಗಳಿಗೆ ಸ್ಥಳದಲ್ಲೇ ನೇರವಾಗಿ ಆಯ್ಕೆ ಮಾಡಲಿದ್ದಾರೆ.**

**ಅಕ್ಷರಸ್ಥರು, ಅರ್ಧದಲ್ಲಿಯೇ ಶಾಲೆ ಬಿಟ್ಟವರು ಹಾಗೂ ಎಸ್.ಎಸ್.ಎಲ್.ಸಿ. ಫೇಲ್/ ಪಾಸ್, ಪಿ.ಯು.ಸಿ, ಐ.ಟಿ.ಐ. ಡಿಪ್ಲೋಮ (ಎಲ್ಲಾ ಟ್ರೇಡ್‌ಗಳು), ಪದವೀಧರರು ಹಾಗೂ ಸ್ನಾತಕೋತ್ತರ ಪದವಿ ಹೊಂದಿದವರಿಗೆ ಉದ್ಯೋಗ ಅವಕಾಶಗಳು ಲಭ್ಯವಿದೆ. ಉದ್ಯೋಗಕಾಂಕ್ಷಿಗಳು ತಮ್ಮ ವೈಯಕ್ತಿಕ (ಬಯೋಡಾಟಾ) ವಿವರಗಳೊಂದಿಗೆ “ಉದ್ಯೋಗ ಮೇಳ’ ದಲ್ಲಿ ಭಾಗವಹಿಸಿ ಉದ್ಯೋಗ ದೊರೆಯುವ ಸದಾವಕಾಶವನ್ನು ಸದುಪಯೋಗಪಡಿಸಿಕೊಳ್ಳಬಹುದಾಗಿದೆ.**

**ಹೆಚ್ಚಿನ ಮಾಹಿತಿ ಹಾಗೂ ವಿವರಗಳಿಗಾಗಿ ಈ ಕೆಳಗಿನ ದೂರವಾಣಿ ಸಂಖ್ಯೆ 9036100054 / 9036100064 /9036100065 / 9036100069 ಮೂಲಕ ಸಂಪರ್ಕಿಸಬಹುದಾಗಿದೆ**

**<u>ಸೂಚನೆಗಳು:</u>**

**ಅಭ್ಯರ್ಥಿಗಳು ಆಧಾರ ಕಾರ್ಡ್ ಮತ್ತು ಕನಿಷ್ಠ 10 ಬಯೋಡೇಟಾಗಳೊಂದಿಗೆ ಮೇಳಕ್ಕೆ ಹಾಜರಾಗುವುದು.**

ಉದ್ಯೋಗ ಮೇಳದಲ್ಲಿ ಭಾಗವಹಿಸಲು ಯಾವುದೇ ಫೀ/ಶುಲ್ಕ ಇರುವುದಿಲ್ಲ. ಸಂಪೂರ್ಣ ಉಚಿತವಾಗಿರುತ್ತದೆ.

ಎನ್.ಸಿ.ಎಸ್. ಪೋರ್ಟಲ್ (www.ncs.gov.in) ನಲ್ಲಿ ನೊಂದಾಯಿಸಿಕೊಳ್ಳಬಹುದು ಎಂದು ಪ್ರಕಟಣೆ ತಿಳಿಸಿದೆ.

## ಸಚಿವರ ಪ್ರವಾಸ

ಬೆಂಗಳೂರು, ಮಾರ್ಚ್ 5 (ಕರ್ನಾಟಕ ವಾರ್ತೆ)

ಕಂದಾಯ ಸಚಿವ ಆರ್. ವಿ. ದೇಶಪಾಂಡೆ ಅವರು ಮಾರ್ಚ್ 6 ಮತ್ತು 7 ರಂದು ಶಿವಮೊಗ್ಗ, ಉತ್ತರ ಕನ್ನಡ, ಉಡುಪಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿನ ವಿವಿಧ ಸರ್ಕಾರಿ ಕಾರ್ಯಕ್ರಮಗಳಲ್ಲಿ ಭಾಗವಹಿಸಿ, ಮಾರ್ಚ್ 7 ರಂದೇ ಬೆಂಗಳೂರಿಗೆ ಹಿಂತಿರುಗಲಿದ್ದಾರೆ.

## KARNATAKA STATE LEGAL SERVICES AUTHORITY, BENGALURU

## PROGRESS REPORT OF KSLSA FOR THE PERIOD JANUARY 2018 TO DECEMBER 2018

During the period from **January 2018 to December 2018** various programmes have been organized with the objective to provide free and competent legal services.

1. Free Legal Aid provided to **4,445** deserving applicants in the pending cases lying before various courts in the State.
2. **7,881** Legal Literacy Programmes were conducted State wise. Legal Literacy Chariot and Mobile buses have been used for the said programmes. There are total of **13,97,964** beneficiaries out of these programmes.
3. **2,331** cases were settled through Mediation Centre.

4. **62,889** persons have provided free legal advice from Legal Aid Clinics established in all the District Legal Services Authorities and Taluka Legal Services Committees in the State.
5. **87,419** cases pending in the Courts and **7,425** pertaining to Pre-litigation cases were disposed off in Regular Lok Adalat during the period from **January 2018 to December 2018**.
6. As per the directions of **National Legal Services Authority**, **National Lok Adalats** were conducted during the year **2018**, **85,692** cases pending in the Courts and **15,139** pertaining to Pre-litigation cases were settled in the National Lok Adalats.
7. Compensation amount of **Rs.8,03,99,500/-** has been awarded to **397** number of victim under Victim Compensation Scheme during the period from **January 2018 to December 2018**.

   A compensation amount of **Rs.3,00,00,000/-** has been awarded to **157** number of victim under Victim Compensation Scheme during the period from **January 2019 till date.**

8. Totally **885 Legal Aid Clinics** were established in the State of Karnataka. Totally **2,766 Advocates** are on the Panel of Legal Services Institutions and **2,550 Para Legal Volunteers** are working in the Legal Services Institutions in the State of Karnataka. Totally **1,19,406 Advice** were given through **885 Legal Aid Clinics.**

**"Access to justice for all"** is the vision of Legal Services in India. The Karnataka State Legal Services Authority was established with the noble object of providing free and competent legal services to the weaker sections of the society and to ensure that justice is not denied to any citizen by reason of economic or other disabilities and to organise Lok

Adalats and to secure that the operations of the legal system promotes justice on the basis of equal opportunity, irrespective of caste, creed or religion and the likes are treated alike.

Lok Adalats have become an important instrument for deciding the disputes / cases with a sense of finality and to the satisfaction of the disputing parties. In the last couple of years, the movement has become popular and this is reflected by a quantum jump in the number of cases being settled in Lok Adalats, impacting the number of cases pending in the different Courts. Lok Adalats have acted as a potent weapon with the judiciary to remove from the system all such matters that do not really call for the attention and time of the Court.

In view of the stupendous success of the National Lok Adalat, establishing firmly the utility of the Lok Adalats to the common man and additionally to the Courts in tackling pendency, and inspired by the response of litigant public, NALSA is desirous to hold National Lok Adalats throughout the country ***on Second Saturdays of March, July, September and December during the year 2019 on all subject matters*** and the first such National Lok Adalat is scheduled to be held on **09.03.2019**.

Karnataka State Legal Services Authority is conducting National Lok Adalat in all court complexes in the State. The litigants are requested to take this opportunity for quick settlement of their matters (both pending litigation/pre-litigation) through National Lok Adalats on the specified dates as shown under

<table>
<tr><th>Sl.No.</th><th>Date</th><th>Subject</th></tr>
<tr><td>1</td><td>09.03.2019</td><td rowspan="2"><u>Pre-litigation</u><br>9. NI Act cases under Section 138;<br>10. Bank Recovery cases;<br>11. Labour disputes cases;<br>12. Electricity and Water Bills (excluding non-compoundable)<br>13. Others (Criminal Compoundable, Matrimonial and other Civil disputes, please specify)<br><u>Pending in the Court</u><br>1. Criminal Compoundable Offence</td></tr>
<tr><td>2</td><td>13.07.2019</td></tr>
</table>

| | | |
|---|---|---|
| 3 | 14.09.2019 | 2. NI Act cases under Section 138;<br>3. Bank Recovery suits;<br>4. MACT cases;<br>5. Labour disputes cases;<br>6. Electricity and Water Bills (excluding non-compoundable);<br>7. Matrimonial disputes;<br>8. Land Acquisition cases;<br>9. Service matters relating to pay and allowances and retiral benefits;<br>10. Revenue cases (pending in District Courts and High Courts only);<br>11. Other Civil cases (rent, easmentary rights, injunction suits, specific performance suits) etc., |
| 4 | 14.12.2019 | |

**Advantages of settlement of disputes before the Lok Adalats are:**

- You can get your disputes settled speedily through the process of Lok Adalat.
- You can participate in the Lok Adalat in person or through an Advocate.
- Parties are suitably guided to settle the matter before the Lok Adalat.
- Through amicable settlement, litigation will end and relationship is restored and both parties will depart from the Court happily.
- Pre-litigation cases can also be settled through Lok Adalat.
- Parties are entitled to get refund of full Court fee once the matter is amicably settled in the Lok Adalat.
- Settlement before the Lok Adalat is speedy and inexpensive remedy for the parties.
- Unique opportunity for settlement of disputes.

The Karnataka State Legal Services Authority has issued directions to all the DLSAs and TLSCs to organize **National Lok Adalat** on **09.03.2019** in all the Courts in the State and to take up the settlement of cases pending in the respective Courts. The interested litigants can settle the civil, compoundable criminal matters before the National Lok Adalat

as well as Pre-litigation cases. It is a best opportunity to settle the cases amicably at no cost. Therefore general public are requested to make use of National Lok Adalat for settlement of cases.

## IN THE MATTER OF

## LEGAL LITERACY PROGRAMMES

1) During the period from January 2018 to December 2018, conducted around **7,881** Legal Literacy **programmes/activities** in the State in which **13,97,964** were the beneficiaries. (Annexure A)

2) KSLSA has 4 Legal Services Vehicles. Around **2,565 Legal Literacy programmes/activities** were conducted through these vehicles in which **1,30,150** were the beneficiaries for the year of 2018. (Annexure B)

3) During the period from January 2018 to December 2018 as per the NALSA schemes around **1,904 programmes/activities** were organised in the State in which **2,99,263** persons attended the awareness programmes. (Annexure C)

4) During the period from January 2018 to December 2018 around **189 camps** organised on various schemes of NALSA (as per new module) in the State in which **27,689 were the beneficiaries.** (Annexure C)

5) **Two Special Campaigns** held on
    1) Enhancing Legal Services to Women inmates and their accompanying children in prisons for 10 days from 21st June to 30th June 2018.

       **Outcome of the campaign :** during the campaign awareness programs, training programs and health checkup was conducted. From this campaign Prisoners knew about their rights to file an appeal, they got trained in hand made works like making of artificial jeweleries, making of file boards, preparation of papers bags, etc. and also trained

in computer operation. After the campaign prisoners are opined that for this campaign we got more knowledge about our cases in the court and we got confidence to lead our livelihood after release because of all these training programs. And health camp was successfully conducted during the campaign.

2) Accessing justice to convicts in prisons through Legal Services : A Campaign was conducted for the period of two months from 22nd October to 22nd December 2018.

**Outcome of the Campaign :** during the campaign legal awareness programmes were conducted. As a result the convicted prisoners are knew about their rights to file an appeal, they knew about their appeal status and some of the convicts are filed an application through High Court Legal Services Committee to file an appeal before the Hon'ble High Court of Karnataka and one prisoner from Mysuru Central Prison has filed an application for appeal before Supreme Court Legal Services Committee.

After the Campaign The Indira Gandhi National Open University offered the distance education to the interested prisoners in Shivamogga Central Prison and distribute the study materials with the help of team.

6) Organised one day awareness programme on 22/02/2019 at Kalabhavana, Navanagara in Bagalkote for the **protection and rehabilitation of Devadasi.** (Programme Invitation Card enclosed)

## ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ, ಬೆಂಗಳೂರು

**ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಜನವರಿ 2018 ರಿಂದ ಡಿಸೆಂಬರ್ 2018 ರವರೆಗಿನ ಪ್ರಗತಿಯ ವರದಿಯ ಸಂಕ್ಷಿಪ್ತ ವಿವರ ಈ ಕೆಳಕಂಡಂತಿದೆ.**

**1.** ರಾಜ್ಯದ ವಿವಿಧ ನ್ಯಾಯಾಲಯಗಳಲ್ಲಿ ಇತ್ಯರ್ಥಕ್ಕೆ ಬಾಕಿ ಇದ್ದ ಪ್ರಕರಣಗಳಿಗೆ ಸಂಬಂಧಿಸಿದಂತೆ ಕಾನೂನು ನೆರವಿಗಾಗಿ ಅರ್ಜಿ ಸಲ್ಲಿಸಿದ್ದ **4,445** ಅರ್ಹ ಕಕ್ಷಿದಾರರಿಗೆ ಕಾನೂನು ನೆರವನ್ನು ನೀಡಲಾಗಿದೆ.

2. ರಾಜ್ಯ ಪ್ರಾಧಿಕಾರದ ಕಾನೂನು ಸಾಕ್ಷರಥಾ ವಾಹನಗಳನ್ನು ಬಳಸಿಕೊಂಡು ರಾಜ್ಯಾದ್ಯಂತ ಸುಮಾರು **7,881** ಕಾರ್ಯಕ್ರಮಗಳನ್ನು ಆಯೋಜಿಸಲಾಗಿದ್ದು, ಸದರಿ ಕಾರ್ಯಕ್ರಮಗಳ ಉಪಯೋಗವನ್ನು ಸುಮಾರು **13,97,964** ಜನರು ಪಡೆದುಕೊಂಡಿರುತ್ತಾರೆ.

3. ಮಧ್ಯಸ್ಥಿಕೆ ಕೇಂದ್ರದ ಮೂಲಕ ಒಟ್ಟು **2,331** ಪ್ರಕರಣಗಳನ್ನು ಇತ್ಯರ್ಥಗೊಳಿಸಲಾಗಿದೆ.

4. ರಾಜ್ಯದ ಎಲ್ಲಾ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರಗಳು ಹಾಗೂ ತಾಲ್ಲೂಕು ಕಾನೂನು ಸೇವೆಗಳ ಸಮಿತಿಗಳ ವತಿಯಿಂದ ವಿವಿಧ ಸ್ಥಳಗಳಲ್ಲಿ ಸ್ಥಾಪಿಸಲಾಗಿರುವ ಉಚಿತ ಕಾನೂನು ಸಲಹಾ ಕೇಂದ್ರದ ಮೂಲಕ **62,889** ಜನರಿಗೆ ಉಚಿತ ಕಾನೂನು ಸಲಹೆ ನೀಡಲಾಗಿದೆ.

5. **ಜನವರಿ 2018 ರಿಂದ ಡಿಸೆಂಬರ್ 2018** ರವರೆಗೆ ಪ್ರತಿದಿನದ ಲೋಕ್ ಅದಾಲತ್‌ನಲ್ಲಿ **87,419** ನ್ಯಾಯಾಲಯದಲ್ಲಿ ಬಾಕಿ ಇದ್ದ ಪ್ರಕರಣಗಳು ಹಾಗೂ **7,425** ವ್ಯಾಜ್ಯಪೂರ್ವ ಪ್ರಕರಣಗಳನ್ನು ಇತ್ಯರ್ಥಗೊಳಿಸಲಾಗಿದೆ.

6. ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರದ ನಿರ್ದೇಶನದ ಮೇರೆಗೆ **2018** ನೇ ಸಾಲಿನಲ್ಲಿ ರಾಷ್ಟ್ರೀಯ ಲೋಕ್ ಅದಾಲತ್‌ಗಳನ್ನು ನಡೆಸಿದ್ದು, ಅದರಲ್ಲಿ **85,692** ನ್ಯಾಯಾಲಯದಲ್ಲಿ ಬಾಕಿ ಇದ್ದ ಪ್ರಕರಣಗಳು ಹಾಗೂ **15,139** ವ್ಯಾಜ್ಯಪೂರ್ವ ಪ್ರಕರಣಗಳನ್ನು ವಿಲೇವಾರಿ ಮಾಡಲಾಗಿರುತ್ತದೆ.

7. **ಜನವರಿ 2018 ರಿಂದ ಡಿಸೆಂಬರ್ 2018** ರವರೆಗೆ ಸಂತ್ರಸ್ಥ ಪರಿಹಾರ ಯೋಜನೆ (Victim Compensation Scheme) ಅಡಿಯಲ್ಲಿ ಪರಿಹಾರ ಕೋರಿ ಬಂದ **397** ಸಂತ್ರಸ್ಥರಿಗೆ ಪರಿಹಾರದ ಮೊತ್ತವಾಗಿ **ರೂ.8,03,99,500/-** ಗಳನ್ನು ವಿತರಿಸಲಾಗಿದೆ.

**ಜನವರಿ 2019 ರಿಂದ ಇಲ್ಲಿಯವರೆಗೆ** ಸಂತ್ರಸ್ಥ ಪರಿಹಾರ ಯೋಜನೆ (Victim Compensation Scheme) ಅಡಿಯಲ್ಲಿ ಪರಿಹಾರ ಕೋರಿ ಬಂದ **157** ಸಂತ್ರಸ್ಥರಿಗೆ ಪರಿಹಾರದ ಮೊತ್ತವಾಗಿ **ರೂ.3,00,00,000/-** ಗಳನ್ನು ವಿತರಿಸಲಾಗಿದೆ.

8. ರಾಜ್ಯಾದ್ಯಂತ ಇರುವ ಕಾನೂನು ಸೇವಾ ಸಂಸ್ಥೆಗಳಲ್ಲಿ **ಒಟ್ಟು 885 ಕಾನೂನು ಸೇವಾ ಕೇಂದ್ರಗಳನ್ನು** ಸ್ಥಾಪಿಸಲಾಗಿದೆ. ಸದರಿ ಸಂಸ್ಥೆಗಳ ವಕೀಲರ ಪಟ್ಟಿಯಲ್ಲಿ **ಒಟ್ಟು 2,766 ವಕೀಲರನ್ನು** ನೇಮಿಸಲಾಗಿದೆ ಹಾಗೂ **2,550 ಅರೆಕಾಲಿಕ ಸ್ವಯಂ ಸೇವಕರು** ಇರುತ್ತಾರೆ. ಈ ಸೇವಾ ಕೇಂದ್ರಗಳ ಮೂಲಕ **ಒಟ್ಟು 1,19,406 ಜನರಿಗೆ ಕಾನೂನು ಸಲಹೆ**ಯನ್ನು ನೀಡಲಾಗಿದೆ.

**"ಸರ್ವರಿಗೂ ನ್ಯಾಯ"** ಎಂಬುದು ಭಾರತದ ಕಾನೂನು ಸೇವೆಗಳ ಧ್ಯೇಯವಾಗಿದೆ. ಯಾವೊಬ್ಬ ಪ್ರಜೆಯು ತನ್ನ ಆರ್ಥಿಕ ಅಥವಾ ಇತರೆ ದೌರ್ಬಲ್ಯಗಳ ಕಾರಣಗಳಿಂದಾಗಿ ನ್ಯಾಯ ಪಡೆಯುವುದರಿಂದ ವಂಚಿತನಾಗಬಾರದೆಂದು ಉಚಿತ ಮತ್ತು ಸಕ್ಷಮ ಕಾನೂನು ಸೇವೆಗಳನ್ನು ಸಮಾಜದ ದುರ್ಬಲ ವರ್ಗಗಳಿಗೆ ಒದಗಿಸುವ ಸಲುವಾಗಿ ಜನತಾ ನ್ಯಾಯಾಲಯಗಳನ್ನು ವ್ಯವಸ್ಥೆಗೊಳಿಸಲು ಹಾಗೂ ಸಮಾನ ಅವಕಾಶಗಳ ಆಧಾರದ ಮೇಲೆ ನ್ಯಾಯಾಂಗ ವ್ಯವಸ್ಥೆ ಕಾರ್ಯ ನಿರ್ವಹಿಸಿ ನ್ಯಾಯ ಒದಗಿಸುವಂತೆ ಮಾಡುವ ಶ್ರೇಷ್ಠ ಉದ್ದೇಶದಿಂದ ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರವನ್ನು ಸ್ಥಾಪಿಸಲಾಗಿದೆ.. ಜಾತಿ, ಮತಾಭಿಪ್ರಾಯ ಅಥವಾ ಧರ್ಮ ಯಾವುದೇ ಆಗಿದ್ದರೂ ಸಹ ಎಲ್ಲರಿಗೂ ಸಮಾನ ಅವಕಾಶಗಳು ದೊರೆಯುವಂತಾಗಬೇಕು.

ಜನಸಾಮಾನ್ಯರಿಗೆ ಅತೀ ತ್ವರಿತ ಹಾಗೂ ವೆಚ್ಚವಿಲ್ಲದೆ ನ್ಯಾಯ ದೊರಕಿಸಲು ಜನತಾ ನ್ಯಾಯಾಲಯವನ್ನು ಸ್ಥಾಪಿಸಲಾಗಿದೆ. ಇದರ ಪರಿಣಾಮವಾಗಿ ನ್ಯಾಯಾಲಯಗಳಲ್ಲಿ ಇತ್ಯರ್ಥಕ್ಕಾಗಿ ಬಾಕಿ ಇರುವ ಪ್ರಕರಣಗಳ ಪರಿಮಾಣದ ಮೇಲೆ ಪರಿಣಾಮ ಬೀರಿದೆ. ನ್ಯಾಯಾಲಯದ ಮೊರೆ ಹೋಗದೆ ಹಾಗೂ ಹೆಚ್ಚು ಸಮಯ ಬೇಕಿರದ ಪ್ರಕರಣಗಳನ್ನು ನ್ಯಾಯಾಂಗ ವ್ಯವಸ್ಥೆಯಿಂದ ಇತ್ಯರ್ಥಪಡಿಸುವಲ್ಲಿ ಜನತಾ ನ್ಯಾಯಾಲಯ ಒಂದು ಸಶಕ್ತ ಆಯುಧವಾಗಿ ಕಾರ್ಯ ನಿರ್ವಹಿಸುತ್ತಿದೆ. ಈ ಉದ್ದೇಶವನ್ನಿಟ್ಟುಕೊಂಡು ರಾಷ್ಟ್ರೀಯ ಕಾನೂನು ಸೇವಾ ಪ್ರಾಧಿಕಾರದವರು ರಾಷ್ಟ್ರೀಯ ಲೋಕ್ ಅದಾಲತನ್ನು ಏರ್ಪಡಿಸಲು ನಿರ್ಧರಿಸಲಾಗಿದ್ದು, ಸದರಿ ರಾಷ್ಟ್ರೀಯ ಲೋಕ್ ಅದಾಲತ್‌ನಲ್ಲಿ ಎಲ್ಲಾ ರೀತಿಯ ವ್ಯಾಜ್ಯ ಪೂರ್ವ ಹಾಗೂ ಬಾಕಿ ಇರುವ ಪ್ರಕರಣಗಳನ್ನು ಇತ್ಯರ್ಥಪಡಿಸಲಾಗುತ್ತದೆ. ಹಾಗೂ ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಗೌರವಾನ್ವಿತ ಕಾರ್ಯನಿರ್ವಾಹಕ ಅಧ್ಯಕ್ಷರ ನಿರ್ದೇಶನದಂತೆ

ಉಚ್ಛ ನ್ಯಾಯಾಲಯ ಕಾನೂನು ಸೇವಾ ಸಮಿತಿ, ಎಲ್ಲಾ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರಗಳು ಹಾಗೂ ತಾಲ್ಲೂಕು ಕಾನೂನು ಸೇವಾ ಸಮಿತಿಗಳು ಮತ್ತು ಖಾಯಂ ಜನತಾ ನ್ಯಾಯಾಲಯಗಳಲ್ಲಿ **ಮಾರ್ಚ್, ಜುಲೈ, ಸೆಪ್ಟೆಂಬರ್ ಹಾಗೂ ಡಿಸೆಂಬರ್ 2019ರ ಎರಡನೇ ಶನಿವಾರ**ಗಳಂದು ರಾಷ್ಟ್ರೀಯ ಲೋಕ್ ಅದಾಲತ್‌ಗಳನ್ನು ಹಮ್ಮಿಕೊಳ್ಳಲಾಗುತ್ತದೆ.

ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ವತಿಯಿಂದ ರಾಜ್ಯದ ಎಲ್ಲಾ ನ್ಯಾಯಾಲಯಗಳ ಆವರಣಗಳಲ್ಲಿ ರಾಷ್ಟ್ರಿಯ ಲೋಕ್ ಅದಾಲತ್‌ಗಳನ್ನು ಆಯೋಜಿಸಲಾಗಿದೆ. ಆದ್ದರಿಂದ, ಸಾರ್ವಜನಿಕರು ತಮ್ಮ ವ್ಯಾಜ್ಯ ಪೂರ್ವ ಹಾಗೂ ನ್ಯಾಯಾಲಯಗಳಲ್ಲಿ ಬಾಕಿ ಇರುವ ಪ್ರಕರಣಗಳನ್ನು ಈ ಕೆಳಕಂಡ ದಿನಾಂಕಗಳಂದು ಲೋಕ್ ಅದಾಲತ್ ಮೂಲಕ ಅತೀ ಶೀಘ್ರವಾಗಿ ಪರಿಹಾರ ಪಡೆದುಕೊಳ್ಳಲು ಇದೊಂದು ಸುವರ್ಣಾವಕಾಶವಾಗಿದೆ.

<table>
<tr><th>ಕ್ರ.ಸಂ.</th><th>ದಿನಾಂಕ</th><th>ವಿಷಯ</th></tr>
<tr><td>1</td><td>09.03.2019</td><td rowspan="3"><u>ವ್ಯಾಜ್ಯ ಪೂರ್ವ ಪ್ರಕರಣಗಳು</u><br><br>(i) ಚೆಕ್ಕು ಅಮಾನ್ಯದ ಪ್ರಕರಣಗಳು u/s 138.<br>(ii) ಬ್ಯಾಂಕ್ ವಸೂಲಾತಿ ಪ್ರಕರಣಗಳು.<br>(iii) ಉದ್ಯೋಗದಲ್ಲಿ ಪುನರ್ ಸ್ಥಾಪಿಸಲ್ಪಡುವ ಪ್ರಕರಣಗಳು ಸೇರಿದಂತೆ, ಕಾರ್ಮಿಕ ವಿವಾದಗಳು ಹಾಗೂ ಕೈಗಾರಿಕಾ ಕಾರ್ಮಿಕರ ವೇತನಕ್ಕೆ ಸಂಬಂಧಿಸಿದ ಕ್ಲೇಮುಗಳು.<br>(iv) ವಿದ್ಯುತ್ ಹಾಗೂ ನೀರಿನ ಶುಲ್ಕಗಳು (non compoundable ಹೊರತುಪಡಿಸಿ).<br>(v) ಇತರ ಪ್ರಕರಣಗಳು (ರಾಜೀಯಾಗಬಲ್ಲ ಅಪರಾಧಿಕ ಪ್ರಕರಣಗಳು, ವೈವಾಹಿಕ) ಕುಟುಂಬ ನ್ಯಾಯಾಲಯ ಹಾಗೂ ಇತರೆ ಸಿವಿಲ್ ಪ್ರಕರಣಗಳು)<br><br><u>ನ್ಯಾಯಾಲಯದಲ್ಲಿ ಬಾಕಿ ಇರುವ ಪ್ರಕರಣಗಳು</u><br><br>(i) ರಾಜೀಯಾಗಬಲ್ಲ ಅಪರಾಧಿಕ ಪ್ರಕರಣಗಳು;<br>(ii) ಚೆಕ್ಕು ಅಮಾನ್ಯದ ಪ್ರಕರಣಗಳು u/s 138;<br>(iii) ಬ್ಯಾಂಕ್ ಪ್ರಕರಣಗಳು;<br>(iv) ಮೋಟಾರು ಅಪಘಾತ ಪರಿಹಾರ ನ್ಯಾಯಾಧೀಕರಣದ ಪ್ರಕರಣಗಳು;<br>(v) ಉದ್ಯೋಗದಲ್ಲಿ ಪುನರ್ ಸ್ಥಾಪಿಸಲ್ಪಡುವ ಪ್ರಕರಣಗಳು ಸೇರಿದಂತೆ, ಕಾರ್ಮಿಕ ವಿವಾದಗಳು ಹಾಗೂ ಕೈಗಾರಿಕಾ ಕಾರ್ಮಿಕರ ವೇತನಕ್ಕೆ ಸಂಬಂಧಿಸಿದ ಕ್ಲೇಮುಗಳು;<br>(vi) ವಿದ್ಯುತ್ ಹಾಗೂ ನೀರಿನ ಶುಲ್ಕಗಳು (non compoundable ಹೊರತುಪಡಿಸಿ);<br>(vii) ವೈವಾಹಿಕ/ಕುಟುಂಬ ನ್ಯಾಯಾಲಯ ಪ್ರಕರಣಗಳು;<br>(viii) ಭೂಸ್ವಾಧೀನ ಪ್ರಕರಣಗಳು;<br>(ix) ವೇತನ ಮತ್ತು ಭತ್ಯೆಗಳಿಗೆ ಸಂಬಂಧಿಸಿದ ಸೇವಾ ಪ್ರಕರಣಗಳು ಹಾಗೂ ಪಿಂಚಣಿ ಪ್ರಕರಣಗಳು;<br>(x) ಕಂದಾಯ ಪ್ರಕರಣಗಳು (ಜಿಲ್ಲಾ ಹಾಗೂ ಉಚ್ಛ ನ್ಯಾಯಾಲಯಗಳಲ್ಲಿ ಬಾಕಿ ಇರುವ</td></tr>
<tr><td>2</td><td>13.07.2019</td></tr>
<tr><td>3</td><td>14.09.2019</td></tr>
</table>

| | | |
|---|---|---|
| | | ಪ್ರಕರಣಗಳು ಮಾತ್ರ);<br>(xi) ಸಿವಿಲ್ ಪ್ರಕರಣಗಳು (ಬಾಡಿಗೆ, ಅನುಭೋಗದ ಹಕ್ಕುಗಳು ನಿರ್ಬಂಧಾಜ್ಞೆ ಮೊಕದ್ದಮೆಗಳು); |
| 4 | 14.12.2019 | |

## ಲೋಕ್ ಅದಾಲತ್‌ನ ಪ್ರಯೋಜನಗಳು

- ನಿಮ್ಮ ಕೇಸನ್ನು ಜನತಾ ನ್ಯಾಯಾಲಯದ ಮೂಲಕ ಶೀಘ್ರವಾಗಿ ಇತ್ಯರ್ಥಗೊಳಿಸಿಕೊಳ್ಳಬಹುದು.
- ಜನತಾ ನ್ಯಾಯಾಲಯದಲ್ಲಿ ನೀವೇ ನೇರವಾಗಿ ಅಥವಾ ವಕೀಲರ ಮುಖಾಂತರ ಭಾಗವಹಿಸಬಹುದು.
- ನ್ಯಾಯಾಲಯಗಳಲ್ಲಿ ಉಭಯ ಪಕ್ಷಕಾರರು ರಾಜೀ ಮಾಡಿಕೊಳ್ಳಲು ಮಾರ್ಗದರ್ಶನ ಮಾಡಲಾಗುವುದು.
- ಇಬ್ಬರಿಗೂ ಒಪ್ಪಿಗೆಯಾಗುವಂತೆ ಪ್ರಕರಣವು ತೀರ್ಮಾನವಾಗುವುದರಿಂದ ಬಾಂಧವ್ಯವು ಉಳಿದು ವಿವಾದವು ತೀರ್ಮಾನವಾಗುತ್ತದೆ.
- ನ್ಯಾಯಾಲಯದಲ್ಲಿ ದಾಖಲಾಗದೇ ಇರುವ ಪ್ರಕರಣಗಳನ್ನು (ವ್ಯಾಜ್ಯಪೂರ್ವ ಪ್ರಕರಣಗಳು) ಸಹ ರಾಜೀ ಸಂಧಾನದ ಮೂಲಕ ಬಗೆಹರಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ.
- ರಾಜೀ ಸಂಧಾನದ ಮೂಲಕ ಪ್ರಕರಣವನ್ನು ಇತ್ಯರ್ಥಪಡಿಸಿಕೊಂಡಲ್ಲಿ ನ್ಯಾಯಾಲಯಕ್ಕೆ ಪಾವತಿಸಲಾದ ನ್ಯಾಯಾಲಯ ಶುಲ್ಕವನ್ನು ಪೂರ್ಣವಾಗಿ ಮರುಪಾವತಿಸಲಾಗುವುದು.
- ಸಂಧಾನಕಾರರು ಸೂಚಿಸುವ ಪರಿಹಾರ ನಿಮಗೆ ಒಪ್ಪಿಗೆಯಾದಲ್ಲಿ ಮಾತ್ರ ನೀವು ರಾಜೀ ಮಾಡಿಕೊಳ್ಳಬಹುದು.
- ಕಡಿಮೆ ಖರ್ಚಿನಲ್ಲಿ ಶೀಘ್ರ ತೀರ್ಮಾನಕ್ಕಾಗಿ ಇದೊಂದು ವಿಶೇಷ ಅವಕಾಶ.

ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರದ ನಿರ್ದೇಶನದ ಮೇರೆಗೆ ರಾಜ್ಯ ಮಟ್ಟದಲ್ಲಿ **ಮಾರ್ಚ್, ಜುಲೈ, ಸೆಪ್ಟೆಂಬರ್ ಹಾಗೂ ಡಿಸೆಂಬರ್ 2019ರ ಎರಡನೇ ಶನಿವಾರ**ಗಳಂದು ಎಲ್ಲಾ ರೀತಿಯ ಸಿವಿಲ್ ಹಾಗೂ

ಕ್ರಿಮಿನಲ್ ಪ್ರಕರಣಗಳನ್ನು ಹಾಗೂ ವ್ಯಾಜ್ಯ ಪೂರ್ವ ಪ್ರಕರಣಗಳನ್ನು ರಾಷ್ಟ್ರೀಯ ಲೋಕ್ ಅದಾಲತ್‌ನಲ್ಲಿ ಇತ್ಯರ್ಥಪಡಿಸಲಾಗುವುದು. ಮೊದಲಿಗೆ, **09.03.2019** ರಂದು **ರಾಷ್ಟ್ರೀಯ ಲೋಕ್ ಅದಾಲತನ್ನು** ಹಮ್ಮಿಕೊಳ್ಳಲಾಗಿದ್ದು, ಸಾರ್ವಜನಿಕರು ಈ ಕಾರ್ಯಕ್ರಮದ ಸದುಪಯೋಗ ಪಡಿಸಿಕೊಳ್ಳಬೇಕೆಂದು ವಿನಂತಿ.

## ರಾಷ್ಟ್ರೀಯ ಲೋಕ್ ಅದಾಲತ್

**ದಿನಾಂಕ: 09.03-2019 ರಂದು ರಾಜ್ಯಾದ್ಯಂತ ರಾಷ್ಟ್ರೀಯ ಲೋಕ್ ಅದಾಲತ್ ಹಮ್ಮಿಕೊಳ್ಳಲಾಗಿದ್ದು, ಸದರಿ ಲೋಕ್ ಅದಾಲತ್‌ನಲ್ಲಿ ಸಾರ್ವಜನಿಕರು ನ್ಯಾಯಾಲಯದಲ್ಲಿರುವ ತಮ್ಮ ವ್ಯಾಜ್ಯಗಳನ್ನು / ವ್ಯಾಜ್ಯಪೂರ್ವ ಪ್ರಕರಣಗಳನ್ನು ಇತ್ಯರ್ಥಪಡಿಸಿಕೊಳ್ಳಲು ಸಂಬಂಧಪಟ್ಟ ಉಚ್ಚ ನ್ಯಾಯಾಲಯ ಕಾನೂನು ಸೇವಾ ಸಮಿತಿಯನ್ನು, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರಗಳನ್ನು, ತಾಲ್ಲೂಕು ಕಾನೂನು ಸೇವಾ ಸಮಿತಿಗಳನ್ನು ಅಥವಾ ಖಾಯಂ ಜನತಾ ನ್ಯಾಯಾಲಯಗಳನ್ನು ಸಂಪರ್ಕಿಸಿ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ ಕೋರಿದೆ.**

**NABARD**
**KARNATAKA REGIONAL OFFICE, BANGALORE**
**STATE CREDIT SEMINAR 2019-20**

The State Credit Seminar 2019-20 was organized by NABARD, Karnataka Regional Office on 5th March 2019, at Vidhana Soudha, Bangalore. The Seminar was graced by Shri T M Vijay Bhaskar, IAS, Chief Secretary as Chief Guest.

The Seminar was attended by Smt. Vandita Sharma, IAS, Addl. Chief Secretary and Development Commissioner, Senior officials from key department of GoK, senior executives from public and pvt. sector banks. Shri P V S Suryakumar, Chief General Manager, guided the proceedings and delivered the key note address.

State Focus Paper 2019-20', prepared by NABARD Karnataka RO was released by the Chief Guest Shri Shri T M Vijay Bhaskar, IAS, Chief Secretary along with other honoured guests present on the dais. The Seminar deliberated on the theme of **Sustainable Agriculture Practices**. A credit potential of Rs.234562.65 crore has been estimated under Priority Sector for the year 2019-20. In his key note address, Chief Secretary complimented NABARD for presenting the State Focus Paper 2019-20 which gives an overview of credit requirement by different segment of the economy in the state during 2019-20 and wished the projection made will be translated into credit by bankers. He also highlighted various schemes of GoK for the welfare of the farmers. He also appreciated NABARD for bringing out Infrastructure gaps in each sectors which the state govt. would like to address to the extent possible. He appealed banks to translate the potential into credit for development of the state.

Shri P V S Suryakumar in his address focused on NABARD's Perception on the Development of Karnataka and appraised the house about various business and developmental initiatives of NABARD like refinance support, infrastructure support under RIDF, DIDF, FPO formation & nurturing, EShakti project for digitization of SHGs etc. He solicited cooperation of State Govt., Banks and other stake holders for achieving the estimated potential. The Sectoral presentation was made highlighting the issues , challenges and way forward in major sectors like – farm sector, Water Resources, Plantation & Horticulture, dairy and fisheries etc.

**Highlights of State Focus Paper 2019-20**

- The State Credit Plan for the Priority Sector has been projected at Rs.234562.65 crore for 2019-20, an increase of 16% over the projections made for 2018-19. The projection for agriculture is estimated at Rs.1,40,151 crore which is 59 % of the total projection. (Major component : crop loan Rs.81565 cr., water Resources Rs.5774cr., Plantation & Horticulture Rs.7276 cr.,Dairy development Rs.5582 cr., etc.)

**Development Perspective**

• Advocating for adoption of Sustainable Agricultural practices to cop up with climate change effect.
• Consolidation & aggregation through Farmer Producers Organization (FPO) to achieve economy of scale & promote market linkage.
• Support to State Govt. for creating Rural infrastructure through Rural Development Infrastructure Fund (RIDF) & Dairy Infrastructure Development fund.




## ಅಬಕಾರಿ ಇಲಾಖಾ ನಿಯಂತ್ರಣ ಕೊಠಡಿಯ ಟೋಲ್ ಫ್ರೀ ದೂರವಾಣಿ ಸಂಖ್ಯೆ 1800–425–5273 ಕ್ಕೆ ಕರೆ ಮಾಡಿ

ಬೆಂಗಳೂರು, ಮಾರ್ಚ್ 5 (ಕರ್ನಾಟಕ ವಾರ್ತೆ)

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಅಬಕಾರಿ ಇಲಾಖೆಗೆ ಸಂಬಂಧಿಸಿದಂತೆ ಸಾರ್ವಜನಿಕರು 2019 ರ ಲೋಕಸಭಾ ಚುನಾವಣೆ ಸಂಬಂಧ, ಭಾರತೀಯ ಮದ್ಯ ಹಾಗೂ ಅಬಕಾರಿ ವಸ್ತುಗಳ ಹೊಂದುವಿಕೆ, ದಾಸ್ತಾನು, ಸಾಗಾಣಿಕೆ, ಮಾರಾಟ ಮತ್ತು ಸಾರ್ವಜನಿಕರಿಗೆ ಹಂಚುವಿಕೆ ಇತ್ಯಾದಿ ಅಬಕಾರಿ ಅಕ್ರಮಗಳ ಯಾವುದೇ ದೂರುಗಳು/ಮಾಹಿತಿಗಳನ್ನು ಈ ಕೆಳಕಂಡ ಅಬಕಾರಿ ಇಲಾಖಾ ನಿಯಂತ್ರಣ ಕೊಠಡಿಯ ಟೋಲ್ ಫ್ರೀ ದೂರವಾಣಿ ಸಂಖ್ಯೆ 1800–425–5273 ಕ್ಕೆ ಕರೆ ಮಾಡಿ ತಿಳಿಸಬಹುದಾಗಿದೆ.

ಈ ಜೊತೆಗೆ ಜಿಲ್ಲೆಯ ಅಬಕಾರಿ ಇಲಾಖಾ ಅಧಿಕಾರಿಗಳ ದೂರವಾಣಿ ಸಂಖ್ಯೆಗಳಿಗೂ ಕೂಡಾ ಕರೆ ಮಾಡಬಹುದಾಗಿದೆ.

ಡೆಪ್ಯುಟಿ ಕಮಿಷನರ್ ಆಫ್ ಎಕ್ಸೈಸ್, ಬೆಂಗಳೂರು ಗ್ರಾಮಾಂತರ ಜಿಲ್ಲೆ – 94495 97029, ಅಬಕಾರಿ ಉಪ ಅಧೀಕ್ಷಕರು, ನೆಲಮಂಗಲ ವಿಭಾಗ – 94495 97036, ಅಬಕಾರಿ ಉಪ ಅಧೀಕ್ಷಕರು, ಹೊಸಕೋಟೆ ವಿಭಾಗ, ಹೊಸಕೋಟೆ – 94495 97034, ಅಬಕಾರಿ ನಿರೀಕ್ಷಕರು, ದೇವನಹಳ್ಳಿ ವಲಯ – 94495 97268, ಅಬಕಾರಿ ನಿರೀಕ್ಷಕರು, ದೊಡ್ಡಬಳ್ಳಾಪುರ ವಲಯ – 94495 97269, ಅಬಕಾರಿ ನಿರೀಕ್ಷಕರು, ನೆಲಮಂಗಲ ವಲಯ – 94495 97271, ಅಬಕಾರಿ ನಿರೀಕ್ಷಕರು, ಹೊಸಕೋಟೆ ವಲಯ – 94495 97270 ಈ ದೂರವಾಣಿಗಳ ಮೂಲಕ ದೂರುಗಳನ್ನು ಸಲ್ಲಿಸಬಹುದಾಗಿದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.